**ಪ್ರಸಾರಾಂಗ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಚಾಮರಾಜ ಪೇಟೆ, ಬೆಂಗಳೂರು.

# ಟೆಂಡರ್ ಅರ್ಜಿ

## ಕೆಲಸದ ಹೆಸರು

## ಸಂಸ್ಕೃತ ಪಠ್ಯ ಪುಸ್ತಕಗಳ ಮುದ್ರಣ

# **<u>ಟೆಂಡರ್ ಸೂಚಿಕೆ</u>**

1. ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ
2. ಟೆಂಡರ್ ಪ್ರಕಟಣೆ
3. ಟೆಂಡರುದಾರರ ಮನವಿಯ ನಮೂನೆ
4. ಟೆಂಡರ್‌ನ ನಿಬಂಧನೆಗಳು ಮತ್ತು ಷರತ್ತುಗಳು
5. ತಾಂತ್ರಿಕ ತಪಶೀಲು – ಅನುಸೂಚಿ – ಎ–1 ಮತ್ತು ಎ–2
6. ತಾಂತ್ರಿಕ ಸವಾಲು – ಅನುಸೂಚಿ – ಬಿ–1 & ಬಿ–2
7. ಆರ್ಥಿಕ ಸವಾಲು – ಅನುಸೂಚಿ – ಸಿ–1 ಮತ್ತು ಸಿ –2

## **<u>ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ</u>**

| | | |
|---|---|---|
| 1. | ಟೆಂಡರ್ ಅಧಿಸೂಚನೆ ದಿನಾಂಕ | : 05.08.2015 |
| 2. | ಟೆಂಡರ್ ಡಾಕ್ಯುಮೆಂಟ್‌ಅನ್ನು ಅಂತರ್ಜಾಲದಲ್ಲಿ ಪಡೆಯುವ ದಿನಾಂಕ | : 06.08.2015 |
| 3. | ಟೆಂಡರ್ ಡಾಕ್ಯುಮೆಂಟ್‌ಅನ್ನು ಅಂತರ್ಜಾಲದಲ್ಲಿ ಸಲ್ಲಿಸಲು ಅಂತಿಮ ದಿನಾಂಕ | : 12.08.2015 |
| 4. | ತಾಂತ್ರಿಕ ಸವಾಲು ಲಕೋಟೆ–1ನ್ನು& ಆರ್ಥಿಕ ಸವಾಲು ತೆರೆಯುವ ದಿನಾಂಕ | : 17.08.2015 |
| | ಸಮಯ ಮತ್ತು ಸ್ಥಳ | ಬೆಳಗ್ಗೆ 11.30 ಗಂಟೆಗೆ |

**ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು–560 018 .

ಪ್ರಸಾರಾಂಗ
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು–560 018.

ಕಸಂವಿ: :ಪ್ರ.ಇ–ಪ್ರೊ.ಮು.1/2015–16 ದಿನಾಂಕ: 05.08.2015.

## ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
http://eproc.karnataka.gov.in

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಸಂಸ್ಕೃತ ಪ್ರಥಮಾ, ಮತ್ತು ಕಾವ್ಯ ತರಗತಿಗಳ ಪಠ್ಯ ಪುಸ್ತಕಗಳನ್ನು ಮುದ್ರಣ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯಲ್ಲಿ ಅರ್ಹ ಮುದ್ರಣಾಲಯಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

### ಪ್ರಥಮಾ ತರಗತಿ ಮೂರು ಪುಸ್ತಕಗಳ ಸಂಕ್ಷಿಪ್ತ ವಿವರ

ಭಾಗ–1

| PÀæ¸ÀA | ಪುಸ್ತಕಗಳ ಹೆಸರು | ಪುಸ್ತಕದ ಪುಟಗಳ ಸಂಖ್ಯೆ | ಮುದ್ರಿಸಬೇಕಾದ ಪ್ರತಿಗಳ ಸಂಖ್ಯೆ |
|---|---|---|---|
| **01** | ಪ್ರಭಾ | 8+116=124 ಪುಟಗಳು<br>04 ರಕ್ಷಾಪುಟಗಳು | **15000** ಪ್ರತಿಗಳು |
| **02** | ವಿಭಾ | 8+128=136ಪುಟಗಳು<br>04 ರಕ್ಷಾಪುಟಗಳು | **10000** ಪ್ರತಿಗಳು |
| **03** | ಶುಭಾ | 8+128=136ಪುಟಗಳು<br>04 ರಕ್ಷಾಪುಟಗಳು | **15000** ಪ್ರತಿಗಳು |

| | | |
|---|---|---|
| ಪಠ್ಯ ವಿಷಯದ ಬಣ್ಣ | : | ಬಹುವರ್ಣ |
| ರಕ್ಷಾಪುಟದ ಬಣ್ಣ | : | ಬಹುವರ್ಣ (300 ಜಿ.ಎಸ್.ಎಂ.ಆರ್ಟ್ ಬೋರ್ಡ್) ಮತ್ತು ಮ್ಯಾಟ್ ಲ್ಯಾಮಿನೇಷನ್ |
| ಬೈಂಡಿಂಗ್ | : | ಸೆಕ್ಷನ್ ಸ್ಟಿಚ್‌ನೊಂದಿಗೆ ರ್‍ಯಾಪರ್ ಟರ್ನಿಂಗ್ |
| ಗಾತ್ರ | : | ಮೂರು ಪುಸ್ತಕಗಳು 1/4 ಡೆಮ್ಮಿ |
| ಕಾಗದ | : | ಎನ್.ಎಸ್. ಮ್ಯಾಪ್‌ಲಿಥೊ 80 ಜಿ.ಎಸ್.ಎಂ. ಡಬ್ಬಲ್ ಡೆಮ್ಮಿ |
| ಮುದ್ರಿಸುವ ಅಕ್ಷರಗಳ ಫಾಂಟ್ | : | ದೇವನಾಗರಿ ಶ್ರೀಲಿಪಿ–12 |
| ಅನುಬಂಧಗಳ ಫಾಂಟ್ | : | ದೇವನಾಗರಿ ಶ್ರೀಲಿಪಿ–10 ಫಾಂಟ್ |
| ಛಾಯಾಚಿತ್ರಗಳ ಮುದ್ರಣ | : | (ಅ) ಬಹುವರ್ಣ |
| ರೇಖಾಚಿತ್ರಗಳ ಮುದ್ರಣ | : | (ಅ) ಬಹುವರ್ಣ |

## <u>ಕಾವ್ಯ ತರಗತಿ ನಾಲ್ಕು ಪುಸ್ತಕಗಳ ಸಂಕ್ಷಿಪ್ತ ವಿವರ</u>

ಭಾಗ–2

| PÀæ¸ÀA | ಪುಸ್ತಕಗಳ ಹೆಸರು | ಪುಸ್ತಕದ ಪುಟಗಳ ಸಂಖ್ಯೆ | ಮುದ್ರಿಸಬೇಕಾದ ಪ್ರತಿಗಳ ಸಂಖ್ಯೆ |
|---|---|---|---|
| ಕಾವ್ಯ ಪ್ರಥಮ ವರ್ಷದ ಪಠ್ಯಪುಸ್ತಕಗಳು | | | |
| **01** | ಕಾವ್ಯನವನೀತಮ್ | 8+209=217ಪುಟಗಳು<br>04 ರಕ್ಷಾಪುಟಗಳು | **5000** ಪ್ರತಿಗಳು |
| **02** | ವ್ಯಾಕರಣನವನೀತಮ್ | 8+96=104ಪುಟಗಳು<br>04 ರಕ್ಷಾಪುಟಗಳು | **5000** ಪ್ರತಿಗಳು |
| ಕಾವ್ಯ ದ್ವಿತೀಯ ವರ್ಷದ ಪಠ್ಯಪುಸ್ತಕಗಳು | | | |
| **03** | ಕಾವ್ಯಾಮೃತ | 8+256=264ಪುಟಗಳು<br>04 ರಕ್ಷಾಪುಟಗಳು | **6000** ಪ್ರತಿಗಳು |
| **04** | ವ್ಯಾಕರಣಾಮೃತ | 8+88=96ಪುಟಗಳು<br>04 ರಕ್ಷಾಪುಟಗಳು | **6000** ಪ್ರತಿಗಳು |

| | | |
|---|---|---|
| ಪುಸ್ತಕಗಳ ಸಂಖ್ಯೆ | : | 4 **ಪುಸ್ತಕಗಳು** |
| ಪಠ್ಯ ವಿಷಯದ ಬಣ್ಣ | : | ಏಕವರ್ಣ (ಕಪ್ಪು) |
| ರಕ್ಷಾಪುಟದ ಬಣ್ಣ | : | ಬಹುವರ್ಣ (300 ಜಿ.ಎಸ್.ಎಂ.ಆರ್ಟ್ ಬೋರ್ಡ್) ಮತ್ತು ಮ್ಯಾಟ್ ಲ್ಯಾಮಿನೇಷನ್ |
| ಬೈಂಡಿಂಗ್ | : | ಸೆಕ್ಷನ್ ಸ್ಟಿಚ್‌ನೊಂದಿಗೆ ರ್‍ಯಾಪರ್ ಟರ್ನಿಂಗ್ |
| ಗಾತ್ರ | : | 1/8 ಡೆಮ್ಮಿ |
| ಕಾಗದ | : | ಎನ್.ಎಸ್. ಮ್ಯಾಪ್‌ಲಿಥೊ 70 ಜಿ.ಎಸ್.ಎಂ.ಲೈಟ್‌ವೆಯಿಟ್ ಡಬ್ಬಲ್ ಡೆಮ್ಮಿ |
| ಮುದ್ರಿಸುವ ಅಕ್ಷರಗಳ ಫಾಂಟ್ | : | ದೇವನಾಗರಿ ಶ್ರೀಲಿಪಿ–12 |
| ಉದ್ಧರಣೆಗಳು, ಅಡಿ ಟಿಪ್ಪಣಿಗಳು | : | ದೇವನಾಗರಿ ಶ್ರೀಲಿಪಿ–10 ಫಾಂಟ್ |
| ಅನುಬಂಧಗಳ ಫಾಂಟ್ | : | ದೇವನಾಗರಿ ಶ್ರೀಲಿಪಿ–10 ಫಾಂಟ್ |
| **ಕೆಲಸದ ಅಂದಾಜು ಮೌಲ್ಯ** | **:** | **ರೂ–20,000,00/–** |
| **ಎಲ್ಲಾ ಪುಸ್ತಕಗಳಿಗು ಸೇರಿ ಇ.ಎಂ.ಡಿ** | **:** | **80,000/–** |

ಟೆಂಡರ್ ಅರ್ಜಿ ತುಂಬುವ ಮುನ್ನ ಕಛೇರಿಯಲ್ಲಿರುವ ಪಠ್ಯ ಪುಸ್ತಕಗಳ ಮಾದರಿ ಪ್ರತಿಗಳನ್ನು ನೋಡಬಹುದು. ಸವಿವರವಾದ ತಾಂತ್ರಿಕ ಅಂಶಗಳು, ಇತರ ಷರತ್ತುಗಳು ಮತ್ತು ನಿಬಂಧನೆಗಳನ್ನು ಟೆಂಡರ್ ಅರ್ಜಿಯಲ್ಲಿ ವಿವರಿಸಲಾಗಿದೆ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು–560 018.

# **ಟೆಂಡರ್ ಅರ್ಜಿ**

ದಿನಾಂಕ:05.08.2015

ಇವರಿಂದ,

--------------------,

--------------------.

(ಸಂಸ್ಥೆಯ ಹೆಸರು, ವಿಳಾಸ)

**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು-560 018.

ಮಾನ್ಯರೆ,

ವಿಷಯ:
ಉಲ್ಲೇಖ: ದಿ. --------------ರ -------------------
ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಟೆಂಡರ್ ಅಧಿಸೂಚನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಗೆ ಅನುಸಾರವಾಗಿ ನಮ್ಮ ಮುದ್ರಣ ಸಂಸ್ಥೆಯು ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ, ನಮ್ಮ ಕನಿಷ್ಠ ದರಗಳನ್ನು ನೀಡುತ್ತಿದ್ದೇವೆ. ಟೆಂಡರಿನ ಎಲ್ಲಾ ನಿಬಂಧನೆ ಮತ್ತು ಷರತ್ತುಗಳನ್ನು ತಾಂತ್ರಿಕ ತಪಶೀಲನ್ನು ಓದಿರುತ್ತೇನೆ ಮತ್ತು ಅವುಗಳಿಗೆ ಒಪ್ಪಿರುತ್ತೇನೆ.

ತಮ್ಮ ವಿಶ್ವಾಸಿ

ಸಂಸ್ಥೆಯ ಹೆಸರು ಮತ್ತು ವಿಳಾಸ
ಮೊಹರಿನೊಂದಿಗೆ

<u>**ಟೆಂಡರ್ ಷರತ್ತುಗಳು ಮತ್ತು ನಿಬಂಧನೆಗಳು**</u>

1. ಟೆಂಡರ್‌ದಾರರು ಪ್ರಥಮಾ **,ಕಾವ್ಯ ತರಗತಿಯ ಎಲ್ಲಾಪುಸ್ತಕಗಳಿಗೆ,** ಇ.ಎಂ.ಡಿ. ಮೊತ್ತ **ರೂ.** 80,000/-ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಅಂತರ್ಜಾಲದ ಮೂಲಕ ಪಾವತಿಸುವುದು.
2. ಯಾವುದೇ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಇ.ಎಂ.ಡಿ. ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ಒಳಗೆ ಒಂದೇ ಕಂತಿನಲ್ಲಿ ಪಾವತಿಸಬೇಕು. ಭಾಗಶಃ ಮೊತ್ತ (ಪಾವತಿಸದ) ಪಾವತಿಸುವ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಟೆಂಡರ್‌ಅನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯ ದ್ವಿ-ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಟೆಂಡರ್ ಅರ್ಜಿ ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ ɿಣಣಠಿ://ಚಿಡಿಥಿ.ಇಚಿಡಿಟಿಚಿಣಚಿಇಚಿ.ಡಾಟಿ ಅಂತರ್ಜಾಲದ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
4. ಪಠ್ಯ ವಿಷಯವನ್ನು ಕರ್ನಾಟಕ **ಸಂಸ್ಕೃತ** ವಿಶ್ವವಿದ್ಯಾಲಯ ಅಂಗೀಕರಿಸಿರುವ ತಂತ್ರಾಂಶದಲ್ಲಿ ಮುದ್ರಿಸಬೇಕು.
5. ದರಗಳನ್ನು ಆರ್ಥಿಕ ಸವಾಲು ಅನುಸೂಚಿ 'ಸಿ-1 ಮತ್ತು 2'ರಲ್ಲಿ ಇರುವಂತೆ ನಿಗದಿತ ನಮೂನೆಯಲ್ಲಿಯೇ ಸಲ್ಲಿಸಬೇಕು. ಈ ದರಗಳು ಮುದ್ರಣ, ಕಾಗದ, ಬೈಂಡಿಂಗ್ ಮತ್ತಿತರ ಎಲ್ಲಾ ಕಚ್ಚಾ ಮುದ್ರಣ ಸಾಮಗ್ರಿಗಳನ್ನೊಳಗೊಂಡಿರಬೇಕು ಹಾಗೂ ಯಾವುದಾದರೂ ತೆರಿಗೆ ಇದ್ದಲ್ಲಿ ಅದನ್ನು ಪ್ರತ್ಯೇಕವಾಗಿ ತೋರಿಸಬೇಕು.
6. ಕಾನೂನು ರೀತ್ಯಾ ಲೆವಿಗಳು ಹೆಚ್ಚಾದ ಸಂದರ್ಭದ ಹೊರತಾಗಿ, ಸರಬರಾಜುದಾರರ ಯಾವುದೇ ಇತರೆ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.
7. ಕಾರ್ಯ ಪರಿಶೀಲನೆಯ ಅನುಕೂಲತೆಯ ದೃಷ್ಟಿಯಿಂದ ಅರ್ಜಿಯನ್ನು ಬೆಂಗಳೂರಿನ ವ್ಯಾಪ್ತಿಯಲ್ಲಿ ಬರುವ ಮುದ್ರಣಾಲಯಗಳು ಮಾತ್ರ ಸಲ್ಲಿಸಬಹುದಾಗಿರುತ್ತದೆ. ಬೇರೆ ಸ್ಥಳಗಳ ಮುದ್ರಣಾಲಯದವರು ಅರ್ಜಿಯನ್ನು ಸಲ್ಲಿಸಿದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
8. <u>**ಟೆಂಡರ್‌ನಲ್ಲಿ ಭಾಗವಹಿಸಲು ಕನಿಷ್ಠ ಅರ್ಹತೆಗಳು :**</u>

    (ಅ) ಕನಿಷ್ಠ 5 ವರ್ಷಗಳಿಂದ ಸಕ್ರಿಯ ಮುದ್ರಣ ವ್ಯವಹಾರ ನಡೆಸುತ್ತಿರಬೇಕು.

    (ಆ) ಕಳೆದ 3 ವರ್ಷಗಳಲ್ಲಿ ಅಂದರೆ 2011-12, 2012-13 ಮತ್ತು 2013-14ನೇ ಸಾಲಿನಲ್ಲಿ ಪ್ರತಿವರ್ಷ ರೂ. 50ಲಕ್ಷ ಮುದ್ರಣ ವ್ಯವಹಾರ ನಡೆಸಿರಬೇಕು.

    (ಇ) ಟೆಂಡರ್ ಅಧಿಸೂಚನೆಯಲ್ಲಿನ ಪುಸ್ತಕಗಳಿಗೆ ದರಪಟ್ಟಿ ಸಲ್ಲಿಸುವವರು ಉತ್ತಮ ಸ್ಥಿತಿಯಲ್ಲಿನ ಕನಿಷ್ಠ 4 ಬಣ್ಣದ ಒಂದು ಆಫ್‌ಸೆಟ್ ಮುದ್ರಣ ಯಂತ್ರ ಮತ್ತು 2 ಏಕವರ್ಣದ ಆಫ್‌ಸೆಟ್ ಮುದ್ರಣ ಯಂತ್ರ ಹೊಂದಿರಬೇಕು.

    (ಈ) ಪುಸ್ತಕವನ್ನು ಸೆಕ್ಷನ್ ಸ್ಟಿಚ್‌ನೊಂದಿಗೆ ರ್‍ಯಾಪರ್ ಟರ್ನಿಂಗ್ ಬೈಂಡಿಂಗ್ ಮಾಡಬೇಕಾಗಿದ್ದು, ಇಂತಹ ಪುಸ್ತಕವನ್ನು ತಯಾರಿಸುವಲ್ಲಿ ಅಗತ್ಯವಾದ ಎಲ್ಲಾ ಉಪಕರಣಗಳನ್ನು ಮತ್ತು ನುರಿತ ಕೆಲಸದವರನ್ನು ಹೊಂದಿರಬೇಕು.

(ಉ) ಟೆಂಡರ್‌ದಾರರು ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ವಹಿಸಿರುವ ಕನಿಷ್ಠ 15 ಪುಸ್ತಕಗಳನ್ನು ಮುದ್ರಿಸಿರಬೇಕು.

(ಊ) ಯಾವುದೇ ಟೆಂಡರ್‌ದಾರರು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಮುದ್ರಣ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸದೇ ಸುಸ್ತಿದಾರರಾಗಿ ಕಪ್ಪುಪಟ್ಟಿಗೆ ಸೇರಿರಬಾರದು.

9. **ಟೆಂಡರ್‌ನೊಂದಿಗೆ ಈ ಮುಂದಿನ ಪ್ರತಿಗಳನ್ನು ಲಗತ್ತಿಸತಕ್ಕದ್ದು.**

(ಅ) ಕನಿಷ್ಠ 3 ವರ್ಷಗಳಿಂದ ಸಕ್ರಿಯವಾಗಿ ಮುದ್ರಣ ವ್ಯವಹಾರ ನಡೆಸುತ್ತಿರುವ ಬಗ್ಗೆ ದೃಢೀಕರಣಪತ್ರ ಸಲ್ಲಿಸಬೇಕು.

(ಆ) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ ಅಥವಾ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಅಧಿನಿಯಮ ಅಥವಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಸಣ್ಣ ಕೈಗಾರಿಕಾ ಅಧಿನಿಯಮದ ನೋಂದಣಿ ಪ್ರಮಾಣ ಪತ್ರದ ದೃಢೀಕರಿಸಿದ ಅಧಿಕೃತ ದಾಖಲೆಗಳನ್ನು ಸಲ್ಲಿಸಬೇಕು.

(ಇ) ಕಳೆದ 3 ವರ್ಷಗಳಲ್ಲಿ ಮಾರಾಟ ತೆರಿಗೆ ಇಲಾಖೆಗೆ ವಾರ್ಷಿಕ ಹಣಕಾಸು ವ್ಯವಹಾರಗಳ ವ್ಯಾಟ್ ಸಲ್ಲಿಕೆಯ ಬಗ್ಗೆ ವ್ಯಾಟ್ ಅಧಿಕಾರಿಗಳಿಂದ ದೃಢೀಕೃತವಾದ ಪ್ರಮಾಣಪತ್ರ ಸಲ್ಲಿಸಬೇಕು.

(ಈ) ಕಳೆದ 3 ವರ್ಷಗಳಲ್ಲಿ ಅಂದರೆ 2011–12, 2012–13 ಮತ್ತು 2013–14ರಲ್ಲಿ ಆದಾಯ ತೆರಿಗೆ ಇಲಾಖೆಗೆ ವರಮಾನ ತೆರಿಗೆ ಪಾವತಿ ಮಾಡಿರುವ ಬಗ್ಗೆ ಲೆಕ್ಕಪರಿಶೋಧಕರಿಂದ ದೃಢೀಕೃತವಾದ ಪ್ರಮಾಣಪತ್ರ ಸಲ್ಲಿಸಬೇಕು.

(ಉ) ಕಳೆದ 3 ವರ್ಷಗಳಲ್ಲಿ 15 ಪುಸ್ತಕಗಳ ಮುದ್ರಣ ಕೆಲಸವನ್ನು ಯಶಸ್ವಿಯಾಗಿ ಮುಗಿಸಿ ಸರಬರಾಜು ಮಾಡಿದ ಬಗ್ಗೆ ಸಂಬಂಧಪಟ್ಟವರಿಂದ ಪಡೆದಿರುವ ಪ್ರಮಾಣಪತ್ರ ಸಲ್ಲಿಸಬೇಕು.

(ಊ) ಯಾವುದೇ ಟೆಂಡರ್‌ದಾರರು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಮುದ್ರಣ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಲ್ಲದೆ ಸುಸ್ತಿದಾರರಾಗಿ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ **ರೂ.100/–ಗಳ ಛಾಪಾ ಕಾಗದದಲ್ಲಿ ನೋಟರಿಯಿಂದ ದೃಢೀಕರಿಸಿದ ಅಫಿಡವಿಟ್ ಸಲ್ಲಿಸಬೇಕು**.

(ಋ) ಟೆಂಡರ್ ದಸ್ತಾವೇಜು ಕ್ರಮ ಸಂಖ್ಯೆ: 23 ರಲ್ಲಿ ಪ್ರಸ್ತಾಪಿಸಿರುವಂತೆ ಎಲ್ಲಾ ಕಚ್ಚಾ ಸಾಮಗ್ರಿ ಮತ್ತು ಇತರೆ ಮಾದರಿಗಳನ್ನು ಸಲ್ಲಿಸಬೇಕು.

(ಎ) ಈ ಟೆಂಡರ್ ದಸ್ತಾವೇಜಿನಲ್ಲಿರುವ ಷರತ್ತು ಮತ್ತು ನಿಬಂಧನೆಗಳಿಗೆ ಪ್ರತಿ ಪುಟಕ್ಕೆ ಯಥೋಚಿತವಾಗಿ ಸಹಿ ಹಾಕಿರಬೇಕು. ಯಾವುದೇ ತಿದ್ದುಪಡಿಗೆ ದೃಢೀಕರಿಸಬೇಕು.

10. ಟೆಂಡರ್ ದಸ್ತಾವೇಜು ಕ್ರಮ ಸಂಖ್ಯೆ: 9 ರಲ್ಲಿ ಸೂಚಿಸಿದ ಯಾವುದೇ ದಸ್ತಾವೇಜುಗಳಿಲ್ಲದ ಟೆಂಡರ್‌ಅನ್ನು ತಿರಸ್ಕರಿಸಲಾಗುತ್ತದೆ.

11. ಅಂಗೀಕೃತವಾಗದ ಟೆಂಡರ್‌ಗಳಿಗೆ ಸಂಬಂಧಪಟ್ಟಂತೆ ಟೆಂಡರ್‌ನ್ನು ತೆರೆದ ದಿನಾಂಕದಿಂದ 60 ದಿನಗಳೊಳಗೆ ಅವರ ಇ.ಎಂ.ಡಿ.ಯನ್ನು ಹಿಂತಿರುಗಿಸಲಾಗುವುದು ಮತ್ತು ಅಂಗೀಕೃತ ಟೆಂಡರ್‌ಗೆ ಸಂಬಂಧಪಟ್ಟಂತೆ, ಪುಸ್ತಕ ಸ್ವೀಕೃತಿ ಸೂಚಿಯಂತೆ, (ಡೆಲಿವರಿ ಷೆಡ್ಯೂಲ್) ಸರಬರಾಜು ಮಾಡಿದೆಯೆಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಖಚಿತಪಡಿಸಿಕೊಂಡ ನಂತರ ಹಿಂತಿರುಗಿಸಲಾಗುವುದು. ಇ.ಎಂ.ಡಿ.ಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಟೆಂಡರ್‌ಫಾರಂ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

12. ಯಾವುದೇ ಟೆಂಡರುದಾರರು ಚಾಲ್ತಿ ಅವಧಿಯೊಳಗೆ ಸೂಚಿತ ದರಗಳಿಗೆ ಒಪ್ಪದಿದ್ದಲ್ಲಿ ಅಥವಾ ಯಾವುದೇ ಷರತ್ತುಗಳು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

13. ಮುದ್ರಣ ಕಾರ್ಯಾದೇಶ ವಿವರವನ್ನು ಆದೇಶದಲ್ಲಿ ತಿಳಿಸಲಾಗುವುದು. ಟೆಂಡರ್ ದಸ್ತಾವೇಜಿನ ಕ್ರಮ ಸಂಖ್ಯೆ: 18ರಲ್ಲಿ ತಿಳಿಸಿರುವಂತೆ ಉತ್ತಮ ಸ್ಥಿತಿಯಲ್ಲಿ ವಿಶ್ವವಿದ್ಯಾಲಯವು ಸೂಚಿಸುವ ಸ್ಥಳಕ್ಕೆ ಪುಸ್ತಕಗಳನ್ನು ಸರಬರಾಜು ಮಾಡತಕ್ಕದ್ದು.

14. ಮುದ್ರಣಕ್ಕೆ ಸಿದ್ಧವಾದ ಅಂತಿಮ ಕರಡನ್ನು ವಿಶ್ವವಿದ್ಯಾಲಯಕ್ಕೆ ನೀಡಿ ಒಪ್ಪಿಗೆಯನ್ನು ಪಡೆಯುವುದು ಹಾಗೂ ವಿಶ್ವವಿದ್ಯಾಲಯವು ಅಪೇಕ್ಷಿಸಿದಲ್ಲಿ ಟ್ರೇಸಿಂಗ್ ಹಾಳೆಯನ್ನು ಪರಿಶೀಲನೆಗೆ ನೀಡಬೇಕು.
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ದಾಸ್ತಾನು ಮಳಿಗೆಗೆ ಸುಸ್ಥಿತಿಯಲ್ಲಿ ಪುಸ್ತಕಗಳನ್ನು ಮುದ್ರಣಾದೇಶದಲ್ಲಿ ಸೂಚಿಸಿರುವ ಪ್ರತಿಗಳ ಸಂಖ್ಯೆಗನುಗುಣವಾಗಿ ಸರಬರಾಜು ಮಾಡಬೇಕು. ವಿಶ್ವವಿದ್ಯಾಲಯದ ಅಧಿಕಾರಿಗಳು ತಪಾಸಿಸಿದಾಗ ಪುಸ್ತಕದಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ, ಅದನ್ನು ಹಿಂದಕ್ಕೆ ಪಡೆದು ಈ ಬಗ್ಗೆ ಪತ್ರ ಸ್ವೀಕರಿಸಿದ 15 ದಿನಗಳೊಳಗೆ ಬೇರೆ ಪುಸ್ತಕಗಳನ್ನು ಸಿದ್ಧಪಡಿಸಿ ಪೂರೈಸಬೇಕು.

15. ವಿಶ್ವವಿದ್ಯಾಲಯದ ದಾಸ್ತಾನು ಮಳಿಗೆಗೆ ಪುಸ್ತಕಗಳನ್ನು ಸರಬರಾಜು ಮಾಡುವ ಸಮಯದಲ್ಲಿ ಆಗುವ ಸಾಗಣೆ ಹಾನಿಗಳು ಸೇರಿದಂತೆ ಯಾವುದೇ ಕೊರತೆ / ಹಾನಿಯನ್ನು ಅದೇ ದರದಲ್ಲಿ ಸರಬರಾಜುದಾರರು ತಮ್ಮ ಲೆಕ್ಕದಿಂದ ನಷ್ಟ ಭರ್ತಿ ಮಾಡಿಕೊಳ್ಳುವುದು.

16. ಮುದ್ರಿತ ಪುಸ್ತಕಗಳನ್ನು ಉತ್ತಮವಾದ ರಟ್ಟಿನ ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿ ಇಲಾಖೆಯು ಸೂಚಿಸುವ ಯಾವುದೇ ಸ್ಥಳಕ್ಕೆ ಪೂರೈಸತಕ್ಕದ್ದು.

17. ಬಟವಾಡೆ ಪಟ್ಟಿಗನುಗುಣವಾಗಿ ಸರಬರಾಜುದಾರರು ತಪ್ಪಿದ ಸಂದರ್ಭದಲ್ಲಿ ಪರ್ಯಾಯ ಆಧಾರದ ಮೂಲಕ ಕೆಲಸವನ್ನು ಮಾಡಿಸುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ ಮತ್ತು ಬೆಲೆಯಲ್ಲಿ ವ್ಯತ್ಯಾಸವಾದಲ್ಲಿ ಅದನ್ನು ಮುದ್ರಕರಿಂದ ವಸೂಲಿ ಮಾಡಲಾಗುತ್ತದೆ.

18. ಸರಬರಾಜುದಾರರ ಬಿಲ್ಲುಗಳನ್ನು ವಿಶ್ವವಿದ್ಯಾಲಯದ ನಿಯಮಗಳಂತೆ ದಾಸ್ತಾನು ಸ್ವೀಕೃತಿಯ ಪರಿಶೀಲನೆಯ ನಂತರ ಪಾವತಿಸಲಾಗುತ್ತದೆ. ಕೆಲಸ ಪೂರ್ಣವಾಗುವವರೆಗೆ ಯಾವುದೇ ಹಂತದಲ್ಲಿ ಮುಂಗಡ ಹಣವನ್ನು ನೀಡಲಾಗುವುದಿಲ್ಲ.

19. ಮುದ್ರಣ ಸಂಸ್ಥೆಯು ನಮೂದಿಸುವ ಮುದ್ರಣ ದರಗಳ ಆರ್ಥಿಕ ಸವಾಲು ಅನುಸೂಚಿ ಸಿ–1 ಮತ್ತು ಸಿ–2 ರಂತೆ ದರಪಟ್ಟಿಯನ್ನು 2ನೇ ಲಕೋಟೆಯ ಮೂಲಕವೇ ಸಲ್ಲಿಸಬೇಕು.

20. ಟೆಂಡರ್‌ಅನ್ನು ಅಂತರ್ಜಾಲದ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 12.08.2015 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್‌ದಾರರು ಟೆಂಡರ್ ದಸ್ತಾವೇಜಿನಲ್ಲಿ ತಾಂತ್ರಿಕ ತಪಶೀಲು ಅನುಸೂಚಿ–'ಎ'ರಲ್ಲಿ ತಿಳಿಸಿರುವಂತೆ ಕಾಗದ, ರಟ್ಟು, ಮೊದಲಾದ ಕಚ್ಚಾಸಾಮಗ್ರಿಗಳ ಎಲ್ಲಾ ಮಾದರಿಗಳ ಮೇಲೆ ಪ್ರತಿಯೊಂದು ಮಾದರಿ ತಯಾರಿಕೆದಾರರ ಹೆಸರು, ವಿಳಾಸ ಮೊದಲಾದವನ್ನು ನಿರ್ದಿಷ್ಟವಾಗಿ ಉಲ್ಲೇಖಿಸಬೇಕು ಮತ್ತು ಸಹಿ, ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸಬೇಕು ಹಾಗೂ ಟೆಂಡರ್‌ದಾರರು 1/4 ಡೆಮ್ಮಿ ಮತ್ತು 1/8 ಡೆಮ್ಮಿ ಆಕಾರದ ತಲಾ ಒಂದು ಪುಸ್ತಕವನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ವ್ಯಾಕ್ಸ್‌ನೊಂದಿಗೆ ಮೊಹರು ಮಾಡಿ ಟೆಂಡರ್‌ದಾರರ ಹೆಸರು ಮತ್ತು ವಿಳಾಸವನ್ನು ಲಕೋಟೆ ಮೇಲೆ ಬರೆದು ಟೆಂಡರ್ ಸ್ವೀಕರಿಸುವ ನಿಗದಿತ ದಿನಾಂಕ ಮತ್ತು ಸಮಯದೊಳಗೆ ಈ ಕೆಳಗಿನ ವಿಳಾಸಕ್ಕೆ ಕಛೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು.

**ಸಹಾಯಕ ನಿರ್ದೇಶಕರು**
ಪ್ರಸಾರಾಂಗ, **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು–560 018.

21. ಮೊದಲ ಸುತ್ತಿನಲ್ಲಿ ತಾಂತ್ರಿಕ ಸವಾಲು ಅನುಸೂಚಿ–'ಬಿ'ಗೆ ಸಂಬಂಧಿಸಿದ **ತಾಂತ್ರಿಕ ತಪಶೀಲು ಲಕೋಟೆ–1** ಅನ್ನು ಮಾತ್ರ ದಿನಾಂಕ:17.08.2015 ರಂದು ಬೆಳಗ್ಗೆ 11.30 ಗಂಟೆಗೆ ತೆರೆಯಲಾಗುವುದು. ಇಲಾಖೆಯು ಸೂಚಿಸಿದ ಎಲ್ಲಾ ಅಗತ್ಯತೆಗಳನ್ನು ಪೂರೈಸಿದ್ದರೆ ಮತ್ತು ಪುಸ್ತಕಗಳ ಮಾದರಿ ಹಾಗೂ ಕಚ್ಚಾಮುದ್ರಣ ಸಾಮಗ್ರಿಗಳ ಮಾದರಿಗಳನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಟೆಂಡರ್‌ದಾರರು ನಮೂದಿಸಿರುವ ಯಂತ್ರೋಪಕರಣಗಳು ವಾಸ್ತವವಾಗಿ ಇವೆಯೇ ಎಂಬುದನ್ನು ಯಾವುದೇ ಸಮಯದಲ್ಲಿ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರು ಪರಿಶೀಲಿಸಿ ಖಚಿತಪಡಿಸಿಕೊಂಡ ಅನಂತರದಲ್ಲಿ, ಅನುಮೋದಿತವಾದ ಮುದ್ರಣ ಸಂಸ್ಥೆಗಳ **ಆರ್ಥಿಕ ಸವಾಲು ಲಕೋಟೆ–2**(ಅನುಸೂಚಿ ಸಿ–1 ಮತ್ತು ಸಿ–2) ಅನ್ನು ಮಾತ್ರ ದಿನಾಂಕ:17.08.2015 ರಂದು ಮಧ್ಯಾಹ್ನ 02.30 ಗಂಟೆಗೆ ತೆರೆಯಲಾಗುವುದು.

22. ಯಾವುದೇ ಕಾರಣಗಳನ್ನು ನೀಡದೆ ಭಾಗಶಃ ಅಥವಾ ಪೂರ್ಣವಾಗಿ ಯಾವುದೇ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಟೆಂಡರ್‌ನಲ್ಲಿನ ಪುಸ್ತಕಗಳ ಪ್ರಮಾಣವನ್ನು ವಿಂಗಡಿಸುವ ಹಕ್ಕನ್ನು **ಕುಲಸಚಿವರು,ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು**–ಇವರು ಕಾದಿರಿಸಿರುತ್ತಾರೆ. ವಿಶ್ವವಿದ್ಯಾಲಯವು ಕನಿಷ್ಠ ದರ ಸೂಚಿಸುವ ಟೆಂಡರ್‌ನ್ನು ಅಂಗೀಕರಿಸಲೇಬೇಕೆಂದಿಲ್ಲ.

23. ಯಾವುದೇ ಟೆಂಡರಿನಲ್ಲಿ ನಮೂದಿಸಿರುವ ದರಗಳಲ್ಲಿ ಗೊಂದಲ ಉಂಟಾದಾಗ ಸದರಿ ಟೆಂಡರಿನಲ್ಲಿನ ಕನಿಷ್ಠ ದರವನ್ನು ಪರಿಗಣಿಸಲಾಗುತ್ತದೆ. ಮೇಲೆ ಸೂಚಿತ ಮುದ್ರಣ ಕೆಲಸಗಳಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಬಗೆಗೆ ಹಕ್ಕನ್ನು ಕಾಯ್ದಿರಿಸಲಾಗಿದೆ.

24. ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ ಅದನ್ನು ಬಗೆಹರಿಸಲು ಬೆಂಗಳೂರಿನ ನ್ಯಾಯಾಲಯಗಳು ಮಾತ್ರ ಅಧಿಕಾರ ಹೊಂದಿರುತ್ತವೆ.

25. ಟೆಂಡರುಗಳು ಅವುಗಳನ್ನು ತೆರೆದ ದಿನಾಂಕದಿಂದ ಪುಸ್ತಕದ ಮುದ್ರಣ ಕಾರ್ಯ ಮುಗಿಯುವವರೆಗೆ ಚಾಲ್ತಿಯಲ್ಲಿರುತ್ತದೆ.

27. ಯಾವುದೇ ಸ್ಪಷ್ಟೀಕರಣಕ್ಕೆ
**ಡಾ. ಬಿ.ಗೋವಿಂದ**
**ಸಹಾಯಕ ನಿರ್ದೇಶಕರು.ಪ್ರಸಾರಾಂಗ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಪಂಪಮಹಾಕವಿ ರಸ್ತೆ, ಚಾಮರಾಜ ಪೇಟೆ,
ಬೆಂಗಳೂರು–560 018. ದೂರವಾಣಿ ನಂ:9632079891 ಇವರನ್ನು ಸಂಪರ್ಕಿಸತಕ್ಕದ್ದು.

28. ಅನುಸೂಚಿ–'ಎ' ನಲ್ಲಿನ ಕಚ್ಚಾಸಾಮಗ್ರಿಗಳ ಮಾದರಿಗಳನ್ನು ಸರ್ಕಾರಿ ಮುದ್ರಣಾಲಯದ ತಾಂತ್ರಿಕ ಪರಿಶೀಲನೆಗೆ ಒಳಪಡಿಸುವ ಷರತ್ತಿಗೆ ಟೆಂಡರ್‌ದಾರರು ಬದ್ಧರಾಗಿರತಕ್ಕದ್ದು.

29. ಪ್ರತಿ ಪುಸ್ತಕದ ಬಿಲ್ಲಿನಲ್ಲಿ ಅನುಸೂಚಿ-'ಎ' ನಲ್ಲಿನ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ ಎಂದು ಮುದ್ರಣಕಾರರು ದೃಢೀಕರಿಸಲು ಬದ್ಧರಾಗಿರತಕ್ಕದ್ದು.

30. ಆದೇಶದಲ್ಲಿ ಹೇಳಿದಷ್ಟು ಪ್ರತಿಗಳನ್ನು ಪೂರೈಸದಿದ್ದಲ್ಲಿ ಬಿಲ್ಲಿನ ಹಣವನ್ನು ಪಾವತಿಸಲಾಗುವುದಿಲ್ಲ.

31. ಟೆಂಡರ್‌ನಲ್ಲಿ ಯಶಸ್ವಿಯಾದ ಮುದ್ರಣ ಸಂಸ್ಥೆಯವರು ರೂ.100/-ಗಳ ಛಾಪಾ ಕಾಗದದ ಮೇಲೆ ವಿಶ್ವವಿದ್ಯಾಲಯವು ನಿಗದಿಪಡಿಸುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವ ಬಗ್ಗೆ ಕರಾರು ಬರೆದುಕೊಡಬೇಕು.

ಟೆಂಡರುದಾರರ ಸಹಿ
ಹೆಸರು, ವಿಳಾಸ ಮತ್ತು ಮೊಹರಿನೊಂದಿಗೆ

**ತಾಂತ್ರಿಕ ತಪಶೀಲು (ಅನುಸೂಚಿ – ಎ-1)**

| ಕ್ರ.ಸಂ. ತಾಂತ್ರಿಕ ತಪಶೀಲು | ವಿವರ |
|---|---|
| 1.ಪುಸ್ತಕಗಳ ಹೆಸರು | : ಹೆಸರು ಪುಟಸಂಖ್ಯೆ ಪ್ರತಿಗಳು<br>ಪ್ರಭಾ 120 15000<br>ವಿಭಾ 136 10000<br>ಶುಭಾ 136 15000<br>1/4 ಡೆಮ್ಮಿ (20.½ X27½ ಸೆಂ.ಮೀ.) |
| 2.ಒಳಪುಟಗಳ ಮುದ್ರಣಕ್ಕೆ ಬಳಸುವ ಕಾಗದ | : ಎಸ್.ಎಸ್.ಮ್ಯಾಪ್‌ಲಿಥೊ 80 ಜಿ.ಎಸ್.ಎಂ. ಡಬ್ಬಲ್ ಡೆಮ್ಮಿ |
| 3.ಒಳಪುಟಗಳ ಮುದ್ರಣ | : ಬಹುವರ್ಣ |
| 4..ರಕ್ಷಾ ಪುಟಕ್ಕೆ ಬಳಸುವ ಕಾಗದ | : 300 ಜಿ.ಎಸ್.ಎಂ.ಆರ್ಟ್ ಬೋರ್ಡ್ ಮತ್ತು ಮ್ಯಾಟ್ ಲ್ಯಾಮಿನೇಷನ್ |
| 5.ರಕ್ಷಾಪುಟ ಮುದ್ರಣ | : ಬಹುವರ್ಣ (300 ಜಿ.ಎಸ್.ಎಂ.ಆರ್ಟ್ ಬೋರ್ಡ್) ಮತ್ತು ಮ್ಯಾಟ್ ಥರ್ಮಲ್ ಲ್ಯಾಮಿನೇಷನ್ |
| 6.ಬೈಂಡಿಂಗ್ | : ಸೆಕ್ಷನ್ ಸ್ಟಿಚ್‌ನೊಂದಿಗೆ ರ್‍ಯಾಪರ ಟರ್ನಿಂಗ್ |
| 7.ಮುದ್ರಿಸುವ ಅಕ್ಷರಗಳ ಫಾಂಟ್ | : ದೇವನಾಗರಿ ಶ್ರೀಲಿಪಿ 14 ಫಾಂಟ್ |
| 8.ಛಾಯಾಚಿತ್ರಗಳ ಮುದ್ರಣ | : ಬಹುವರ್ಣ |
| 9.ರೇಖಾಚಿತ್ರಗಳ ಮುದ್ರಣ | : ಬಹುವರ್ಣ |

## ತಾಂತ್ರಿಕ ತಪಶೀಲು (ಅನುಸೂಚಿ – ಎ–2)

| ಕ್ರ.ಸಂ. | ತಾಂತ್ರಿಕ ತಪಶೀಲು | ವಿವರ |
|---|---|---|
| 1 | ಪುಸ್ತಕಗಳ ಹೆಸರು | : ಹೆಸರು — ಪುಟಸಂಖ್ಯೆ — ಪ್ರತಿಗಳು<br>1 ಕಾವ್ಯನವನೀತಮ್ — 217 — 5000<br>2 ವ್ಯಾಕರಣನವನೀತಮ್ — 104 — 5000<br>3 ಕಾವ್ಯಾಮೃತ — 256 — 6000<br>4 ವ್ಯಾಕರಣಾಮೃತ — 96 — 6000<br>ಎಲ್ಲಾ ಪುಸ್ತಕಗಳ ಗಾತ್ರ 1/8 ಡೆಮ್ಮಿ (14 X21½ ಸೆಂ.ಮೀ.) |
| 2 | ಒಳಪುಟಗಳ ಮುದ್ರಣಕ್ಕೆ ಬಳಸುವ ಕಾಗದ | : ಎನ್.ಎಸ್.ಮ್ಯಾಪ್‌ಲಿಥೊ 80 ಜಿ.ಎಸ್.ಎಂ. ಡಬ್ಬಲ್ ಡೆಮ್ಮಿ ಲೈಟ್‌ವೆಯಿಟ್ |
| 3 | ಒಳಪುಟಗಳ ಮುದ್ರಣ | : ಕಪ್ಪು |
| 4 | ರಕ್ಷಾ ಪುಟಕ್ಕೆ ಬಳಸುವ ಕಾಗದ | : 300 ಜಿ.ಎಸ್.ಎಂ.ಆರ್ಟ್ ಬೋರ್ಡ್ ಮತ್ತು ಮ್ಯಾಟ್ ಲ್ಯಾಮಿನೇಷನ್ |
| 8 | ರಕ್ಷಾಪುಟ ಮುದ್ರಣ | ; ಬಹುವರ್ಣ(300,ಜಿ.ಎಸ್.ಎಂ.ಆರ್ಟ್ ಬೋರ್ಡ್) ಮತ್ತು ಮ್ಯಾಟ್ ಲ್ಯಾಮಿನೇಷನ್ |
| 6. | ಬೈಂಡಿಂಗ್ | : ಸೆಕ್ಷನ್ ಸ್ಟಿಚ್‌ನೊಂದಿಗೆ ರ್‍ಯಾಪರ ಟರ್ನಿಂಗ್ |
| 7. | ಮುದ್ರಿಸುವ ಅಕ್ಷರಗಳ ಫಾಂಟ್ | : ದೇವನಾಗರಿ ಶ್ರೀಲಿಪಿ 14 ಫಾಂಟ್ |

**(ಅನುಸೂಚಿ – ಬಿ–1)**

**ತಾಂತ್ರಿಕ ಸವಾಲು**

| | | | |
|---|---|---|---|
| 1. | ಮುದ್ರಣಾಲಯದ ಹೆಸರು ಮತ್ತು ವಿಳಾಸ | : | |
| 2. | ಸ್ಥಾಪನೆಗೊಂಡ ವರ್ಷ | : | |
| 3. | ಹಾಲಿ ಮುದ್ರಣಾಲಯದ ವಿಳಾಸ ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ | : | |
| 4. | ಮುದ್ರಣ ಸಂಸ್ಥೆಯ ಸ್ವರೂಪ (ಒಡೆತನ ಸ್ವಾಮ್ಯ/ಪಾಲುಗಾರಿಕೆ / ನಿಯಮಿತ) | : | |
| 5. | ಮಾಲೀಕ ಅಥವಾ ಪಾಲುದಾರ ಅಥವಾ ನಿರ್ದೇಶಕರ ಹೆಸರು ಮತ್ತು ವಿಳಾಸ | : | |
| 6. | ಈ ಟೆಂಡರ್ ಅರ್ಜಿಯಲ್ಲಿ ಸಹಿ ಮಾಡುವ ಅಧಿಕೃತದಾರರ ಹೆಸರು | : | |
| 7. | ಯಂತ್ರಗಳ ವಿವರಣೆ | : | ಅನುಸೂಚಿ ಬಿ–1ರಲ್ಲಿ ನೀಡಬೇಕು |
| 8. | ತಾಂತ್ರಿಕ ಮೇಲ್ವಿಚಾರಣೆ ಮಾಡುವವರ ಹೆಸರು ಮತ್ತು ವಿದ್ಯಾರ್ಹತೆ ಮತ್ತು ಅನುಭವ | : | |

ಟೆಂಡರುದಾರರ ಸಹಿ
ಹೆಸರು, ವಿಳಾಸ ಮತ್ತು ಮೊಹರು

**ಅನುಸೂಚಿ ಬಿ–2**
**ಯಂತ್ರಗಳ ವಿವರ / ತಾಂತ್ರಿಕ ವ್ಯವಸ್ಥೆ**

**ತಾಂತ್ರಿಕ ಸವಾಲು ಅನುಸೂಚಿ–ಬಿ ಕ್ರಮಸಂಖ್ಯೆ–5ಕ್ಕೆ ನೀಡುವ ವಿವರಗಳು**

| ಕ್ರ.ಸಂ. | ಯಂತ್ರಗಳ ವಿವರ | ಸಂಖ್ಯೆ | ಯಂತ್ರ ತಯಾರಿಕ ಸಂಸ್ಥೆ ಹೆಸರು ಮಾದರಿ ಮತ್ತು ವರ್ಷ |
|---|---|---|---|
| 1. | ಮುದ್ರಣ ಯಂತ್ರ (ಬಹು ವರ್ಣ) | | |
| 2. | ಮುದ್ರಣ ಯಂತ್ರ (ಏಕ ಬಣ್ಣದ್ದು) | | |
| 3. | ಮಡಚುವ ಯಂತ್ರ | | |
| 4. | ಕತ್ತರಿಸುವ ಯಂತ್ರ | | |
| 5. | ಪ್ಲೇಟ್ ಮೇಕರ್ | | |
| 6. | ಕೇಸ್ ಮಾಡುವ ಯಂತ್ರ | | |
| 7. | ಫರ್ಫೆಕ್ಟ್ ಬೈಂಡಿಂಗ್ | | |
| 8. | ಕಂಪ್ಯೂಟರ್ | | |
| 9. | ಸ್ಕ್ಯಾನರ್ | | |
| 10. | ಗ್ರಾಫಿಕ್ಸ್ ಸಾಫ್ಟ್‌ವೇರ್ | | |
| 11. | ಲ್ಯಾಮಿನೇಷನ್ ಮಿಷನ್ | | |

| | | | |
|---|---|---|---|
| 12. | ಜನರೇಟರ್ ಮತ್ತು ಅದರ ಸಾಮರ್ಥ್ಯ | | |

ಟೆಂಡರುದಾರರ ಸಹಿ
ಹೆಸರು, ವಿಳಾಸ ಮತ್ತು ಮೊಹರು

**ಅನುಸೂಚಿ ಸಿ–1**

**ಆರ್ಥಿಕ ಸವಾಲು**

**ದರಗಳನ್ನು ನೀಡಬೇಕಾದ ನಮೂನೆ (1/4 ಡೆಮ್ಮಿ ಪುಸ್ತಕ)**

**ಪಠ್ಯಪುಸ್ತಕದ ಹೆಸರು**: ಪ್ರಭಾ, ವಿಭಾ, ಶುಭಾ ತರಗತಿಗಳ(ಪ್ರತ್ಯೇಕವಾಗಿ ದರವನ್ನು ನಮೂದಿಸುವುದು)

| | | | |
|---|---|---|---|
| 1 | ಪ್ಲೇಟ್ ತಯಾರಿಕೆ 16 ಪುಟಗಳ ಒಂದು ಫಾರಂಗೆ<br>ಹತ್ತು ಸಾವಿರ ಪ್ರತಿಗಳಿಗೆ | : | |
| 2 | ಮುದ್ರಣ 16 ಪುಟಗಳ 1 ಫಾರಂಗೆ<br>ಹತ್ತು ಸಾವಿರ ಪ್ರತಿಗಳಿಗೆ | : | |
| 3 | ಮುದ್ರಣಕ್ಕೆ ಬಳಸುವ ಎನ್.ಎಸ್.ಮ್ಯಾಪ್‌ಲಿಥೊ<br>80 ಜಿ.ಎಸ್.ಎಂ. ಡಬ್ಬಲ್ ಡೆಮ್ಮಿ ಕಾಗದ<br>ಲೈಟ್‌ವೆಯಿಟ್<br>ಒಂದು ಸಾವಿರ ಪ್ರತಿಗಳಿಗೆ (16 ಪುಟಗಳಂತೆ) | : | |
| 4 | ರಕ್ಷಾಪುಟಕ್ಕೆ ಬಳಸುವ ಕಾಗದ<br>300 ಜಿ.ಎಸ್.ಎಂ.ಆರ್ಟ್ ಬೋರ್ಡ್ ಮತ್ತು<br>ಮ್ಯಾಟ್ ಲ್ಯಾಮಿನೇಷನ್ | : | |
| 5 | ಸೆಕ್ಷನ್ ಹೊಲಿಗೆಯೊಂದಿಗೆ (16 ಪುಟಗಳ ಫಾರಂಗೆ)<br>ಸಾವಿರ ಪ್ರತಿಗಳಿಗೆ | : | |
| 6 | ಮುಖಪುಟದ ಪ್ಲೇಟ್ ಮತ್ತು ಮುದ್ರಣ<br>ಒಂದು ಸಾವಿರ ಪ್ರತಿಗಳಿಗೆ | : | |

**ವಿ.ಸೂ.: 1. ತೆರಿಗೆಯನ್ನು ಪ್ರತ್ಯೇಕವಾಗಿ ತೋರಿಸಬೇಕು. ಹಾಗೂ ಮುದ್ರಿತ ಪಠ್ಯವನ್ನು ಉಚಿತವಾಗಿ ಸಿ.ಡಿ. ಗೆ ಅಳವಡಿಸಿಕೊಡಬೇಕು.**
**2. ಟಿಡಿಎಸ್ ಅನ್ವಯವಾಗುತ್ತದೆ.**

ಟೆಂಡರುದಾರರ ಸಹಿ
ಹೆಸರು, ವಿಳಾಸ ಮತ್ತು ಮೊಹರು

**ಅನುಸೂಚಿ ಸಿ–2**

**ಆರ್ಥಿಕ ಸವಾಲು**

**ದರಗಳನ್ನು ನೀಡಬೇಕಾದ ನಮೂನೆ (1/8 ಡೆಮ್ಮಿ ಪುಸ್ತಕ)**

**ಪಠ್ಯಪುಸ್ತಕದ ಹೆಸರು** : ಕಾವ್ಯನವನೀತಮ್, ವ್ಯಾಕರಣನವನೀತಮ್, ಕಾವ್ಯಾಮೃತ, ವ್ಯಾಕರಣಾಮೃತ ತರಗತಿಗಳ(ಪ್ರತ್ಯೇಕವಾಗಿ ದರವನ್ನು ನಮೂದಿಸುವುದು)

| | | | |
|---|---|---|---|
| 1 | ಪ್ಲೇಟ್ ತಯಾರಿಕೆ 16 ಪುಟಗಳ ಒಂದು ಫಾರಂಗೆ<br>ಐದು ಸಾವಿರ ಪ್ರತಿಗಳಿಗೆ | : | |
| 2 | ಮುದ್ರಣ 16 ಪುಟಗಳ 1 ಫಾರಂಗೆ<br>ಐದು ಸಾವಿರ ಪ್ರತಿಗಳಿಗೆ | : | |
| 3 | ಮುದ್ರಣಕ್ಕೆ ಬಳಸುವ ಎನ್.ಎಸ್.ಮ್ಯಾಪ್‌ಲಿಥೊ<br>80 ಜಿ.ಎಸ್.ಎಂ. ಡಬ್ಬಲ್ ಡೆಮ್ಮಿ ಕಾಗದ<br>ಲೈಟ್‌ವೆಯಿಟ್<br>ಒಂದು ಸಾವಿರ ಪ್ರತಿಗಳಿಗೆ (16 ಪುಟಗಳಂತೆ) | : | |
| 4 | ರಕ್ಷಾಪುಟಕ್ಕೆ ಬಳಸುವ ಕಾಗದ<br>300 ಜಿ.ಎಸ್.ಎಂ.ಆರ್ಟ್ ಬೋರ್ಡ್ ಮತ್ತು<br>ಮ್ಯಾಟ್ ಲ್ಯಾಮಿನೇಷನ್ | : | |
| 5 | ಸೆಕ್ಷನ್ ಹೊಲಿಗೆಯೊಂದಿಗೆ (16 ಪುಟಗಳ ಫಾರಂಗೆ)<br>ಸಾವಿರ ಪ್ರತಿಗಳಿಗೆ | : | |
| 6 | ಮುಖಪುಟದ ಪ್ಲೇಟ್ ಮತ್ತು ಮುದ್ರಣ<br>ಒಂದು ಸಾವಿರ ಪ್ರತಿಗಳಿಗೆ | : | |

**ವಿ.ಸೂ.: 1. ತೆರಿಗೆಯನ್ನು ಪ್ರತ್ಯೇಕವಾಗಿ ತೋರಿಸಬೇಕು. ಹಾಗೂ ಮುದ್ರಿತ ಪಠ್ಯವನ್ನು ಉಚಿತವಾಗಿ ಸಿ.ಡಿ. ಗೆ ಅಳವಡಿಸಿಕೊಡಬೇಕು.**

**2. ಟಿಡಿಎಸ್ ಅನ್ವಯವಾಗುತ್ತದೆ.**

ಟೆಂಡರುದಾರರ ಸಹಿ

ಹೆಸರು, ವಿಳಾಸ ಮತ್ತು ಮೊಹರು